**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.**

# ಮೂಲ ದಾವೆ ಸಂಖ್ಯೆ 657 /2016

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ ರಾಮಸ್ವಾಮಿ |
| ತಂದೆಯ ಹೆಸರು | : | ಕೃಷ್ಣಪ್ಪ |
| ವಯಸ್ಸು | : | 76 ವರ್ಷ |
| ಉದ್ಯೋಗ | : | ವ್ಯವಸಾಯ ಮತ್ತು ವ್ಯಾಪಾರ |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕ 18.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 3 ನೇ ಪ್ರತಿವಾದಿ ಪರ ಶ್ರೀ ಇ.ಎಂ.ಕೆ, ವಕೀಲರಿಂದಃ**

3 ನೇ ಪ್ರತಿವಾದಿ ನನ್ನ ಮಗನಾಗಿದ್ದು, ನನ್ನ ಪರವಾಗಿ ಒಂದು ಸಾಮಾನ್ಯ ಮುಖ್ತ್ಯಾರ್ ನಾಮೆಯನ್ನು ಬರೆದುಕೊಟ್ಟಿರುತ್ತಾರೆ. ಆದ್ದರಿಂದ ನಾನು ಈ ಪ್ರಕರಣದಲ್ಲಿ 1 ನೇ ಪ್ರತಿವಾದಿ ಮುಖ್ತ್ಯಾರ್ ನಾಮೆದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

3 ನೇ ಪ್ರತಿವಾದಿ ಪರ ಕೊಟ್ಟಿರುವ ಮುಖ್ತ್ಯಾರ್ ನಾಮೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು.

ದಿನಾಂಕ 08.01.2001 ರ ಕ್ರಯಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು.

ದಿನಾಂಕ 02.01.2015 ರ ಉಪ-ನೋಂದಣಾಧಿಕಾರಿಗಳ ಡಿಜಿಟಲ್ ಸಹಿ ಮತ್ತು

ಪ್ರಮಾಣಪತ್ರವಿರುವ ಹಕ್ಕು ಖುಲಾಸೆ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-3 ಎಂದು ಗುರುತಿಸಲಾಯಿತು.

ದಿನಾಂಕ 08.04.2021 ರ ಉಪ-ನೋಂದಣಾಧಿಕಾರಿಗಳ ಡಿಜಿಟಲ್ ಸಹಿ ಮತ್ತು ಪ್ರಮಾಣಪತ್ರವಿರುವ ವಿಭಾಗ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-4 ಎಂದು ಗುರುತಿಸಲಾಯಿತು.

ಸರ್ವೆ ನಂ. 164/3 ಕ್ಕೆ ಸಂಬಂಧಿಸಿದ 2 ಪುಟಗಳುಳ್ಳ ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-5 ಎಂದು ಗುರುತಿಸಲಾಯಿತು.

ಸರ್ವೆ ನಂ. 164/4 ರ ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-6 ಎಂದು ಗುರುತಿಸಲಾಯಿತು.

ಭೂಮಾಪಕರು ತಯಾರಿಸಿರುವ ಹದ್ದುಬಸ್ತ್ ನಕ್ಷೆ ಮತ್ತು ಮಹಜರ್ ನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಡಿ-7 ಮತ್ತು 8 ಎಂದು ಗುರುತಿಸಲಾಯಿತು.

2016-17 ನೇ ಸಾಲಿನ ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯಮಾಪನ ದರಪಟ್ಟಿಯ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-9 ಎಂದು ಗುರುತಿಸಲಾಯಿತು.

ದಿನಾಂಕ 20.02.2009 ರ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ/ಅನ್ಯಕ್ರಾಂತ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-10 ಎಂದು ಗುರುತಿಸಲಾಯಿತು.

ಮ್ಯುಟೇಷನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-11 ಎಂದು ಗುರುತಿಸಲಾಯಿತು.

1 ನೇ ಪ್ರತಿವಾದಿಯ ವ್ಯಾಸಂಗ ದೃಡೀಕರಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು

ನಿ.ಡಿ-12 ಎಂದು ಗುರುತಿಸಲಾಯಿತು.

ಮರಳೂರು ಗ್ರಾಮ ಪಂಚಾಯಿತಿಯವರು ನೀಡಿರುವ ಅಂಗೀಕೃತ/ಅನುಮೋದಿತ ಬಡಾವಣೆ ನಕ್ಷೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-13 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>: ವಾದಿಗಳ ಪರ ವಕೀಲರು ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ** ದಿವಾನಿ **ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**